ದಿನಾಂಕಃ 04-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ಈ ದಾವಾ ಆಸ್ತಿಯ ಬಗ್ಗೆ ಈ ಮೊದಲು ಇದೇ ನ್ಯಾಯಾಲಯದಲ್ಲಿ ಒ ಎಸ್ 405/14 ರಂತೆ ದಾವೆ ನಡೆದಿರುತ್ತದೆ ಎಂದರೆ ಸರಿ. ಆ ದಾವೆಯನ್ನು ಹಾಕಿದ್ದು ಈ ಕೇಸಿನ ಪ್ರತಿವಾದಿ ಎಂ ಎನ್ ಕೃಷ್ಣಾರೆಡ್ಡಿಹಾಕಿರುತ್ತಾರೆ ಎಂದರೆ ಸರಿ. ಅವರಿಗೆ ದಿಃ08-06-16 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ . ಅಫೀಲು ಹಾಕಿರುತ್ತೇವೆ. ಆ ದಾವೆಯನ್ನು ಇದೇ ಸರ್ವೆ ನಂಬರ್ ಪೈಕಿ 10 ಗುಂಟೆ ನನಗೆ ಸೇರಿದ್ದು ಅಂತ ದಾವೆ ಹಾಕಿದ್ದರು ಎಂದರೆ ಗೊತ್ತಿಲ್ಲ. ಆ ದಾವೆಯಲ್ಲಿ ನೀವು ವಿಚಾರಣೆಗೆ ಒಳಪಟ್ಟಿರುತ್ತೀರಿ ಎಂದರೆ ಸರಿ. ಆ ದಾವೆಯಲ್ಲಿ ನೀವು ಪ್ರತಿವಾದ ಪತ್ರ ಹಾಕಿರುತ್ತೀರಿ ಎಂದರೆ ಸರಿ. ಆ ದಾವೆಯ ಪ್ರತಿವಾದ ಪತ್ರದಲ್ಲಿ ಒಂದು ಗುಂಟೆ ಜಮೀನು ನನಗೆ ಸೇರಿದ್ದು ಅಂತ ತಕರಾರು ಹಾಕಿರುತ್ತೀರಿ ಎಂದರೆ ಸರಿ. ನಿಮಗೆ ಒಂದು ಗುಂಟೆ ಸೇರಿರುವುದಕ್ಕೆ ನೀವು ನ್ಯಾಯಾಲಯದಲ್ಲಿ ಸಾಬೀತುಪಡಿಸಿಲ್ಲ ಅಂತ ಹೇಳಿ ತಮ್ಮ ತಕರಾರನ್ನು ಪರಿಗಣಿಸದೆ ದಾವೆಯನ್ನು ಡಿಕ್ರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ಒದಗಿಸಿರುತ್ತೇನೆ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ಹಾಕಿರುವ ಒಂದು ಗುಂಟೆ ಆಸ್ತಿಗೆ ಸಂಬಂದಿಸಿದಂತೆ ಆಸ್ತಿಯು ಪ್ರತಿವಾದಿ ಮೊದಲು ಹಾಕಿದ ದಾವಸ್ವತ್ತಿನ ಒಳಗೆ ಬರುತ್ತದ ಅಥವಾ ಆಚೆ ಬರುತ್ತದ ಎಂದರೆ ಆಚೆ ಬರುತ್ತದೆ. ಪ್ರತಿವಾದಿ ತಮ್ಮ 10 ಗುಂಟೆ ಜಮೀನಿಗೆ ಕಲ್ಲು ಕೂಚಗಳನ್ನು ಹಾಕಿರುತ್ತಾರೆ ಎಂದರೆ ಸುಳ್ಳು ಆ 10 ಗುಂಟೆ ಜಮೀನಿಗೆ ಕಾಂಪೌಂಡ್ ಇರುವುದಿಲ್ಲ. ನೀವು 1 ಗುಂಟೆ ಜಮೀನು ಕೊಂಡು ಕೊಂಡ ನಂತರ ಪೋಡಿಯಾಗಿ ಎಂದರೆ ಪೋಡಿಯಾಗಿಲ್ಲ. ಒ ಎಸ್ 405/14 ಡಿಕ್ರಿಯಾದ ನಂತರ ಪೋಡಿ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಾನು ಒಂದು ವರ್ಷದ ಮೊದಲೇ ಹಣ ಕಟ್ಟಿರುತ್ತೇನೆ. ನಿಮಗೆ ಪೋಡಿಯಾಗಿರುವುದು 2017 ರಲ್ಲಿ ಎಂದರೆ ಸರಿ. ಪೋಡಿ ದಿವಸ ಕೃಷ್ಣಾರೆಡ್ಡಿ ಬಂದಿರುವುದಿಲ್ಲ ಎಂದರೆ ಬಂದಿರುವುದಿಲ್ಲ. ಪೋಡಿಯಾಗುವ ದಿವಸ ಯಾರು

ಯಾರು ಬಂದಿದ್ದರು ಎಂದರೆ 10 ಜನ ಬಂದಿದ್ದರು. ಸರ್ವೆಯರ್ ಯಾರಾರಿಗೆ ನೋಟೀಸು ಕೊಟ್ಟಿರುತ್ತಾರೆ ಅಂತ ಹೇಳಲಾಗುತ್ತದಾ ಎಂದರೆ 10 ಜನ ಮೇಲೆ ನೋಟೀಸು ಕೊಟ್ಟಿದ್ದರು, ಜಮೀನು ಕೊಟ್ಟಿರುವರಿಗೆ ಸುತ್ತಲೂ ಇರುವವರಿಗೆ ನೋಟೀಸು ಕೊಟ್ಟಿರುತ್ತಾರೆ ನ್ಯಾಯಾಲಯದಲ್ಲಿ ತೀರ್ಪು ಆದ ನಂತರ ವೆವಿನ್ಯೂ ಅಧಿಕಾರಿಗಳ ಜೊತೆ ಶಾಮೀಲಾಗಿ ಪೋಡಿ ಮಾಡಿಸಿಕೊಂಡಿರುತ್ತೀರಿ ಎಂದರೆ ಸುಳ್ಳು ಪೋಡಿಯಾದ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಡಿ ಡಿ ಎಲ್ ಆರ್ ಕಛೇರಿಯಲ್ಲಿ ಕೇಸು ಹಾಕಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ಆಸ್ತಿಯ ಉತ್ತರಕ್ಕೆ ಯಾರು ಬರುತ್ತಾರೆ ಎಂದರೆ ನನಗೆ ನೊಂದಣಿ ಮಾಡಿಕೊಟ್ಟಾಗ ಅನಿಲ್ ಎಂಬುವವರು ಇದ್ದರು. ಈಗಲೂ ಅನಿಲ್ ರವರ ಆಸ್ತಿ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ಆಸ್ತಿ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಅನಿಲ್ ರವರ ಆಸ್ತಿಯ ದಕ್ಷಿಣಕ್ಕೆ. ಪ್ರತಿವಾದಿ ಕೃಷ್ಣಾರೆಡ್ಡಿ ರವರ ಜಮೀನಿನ ಅಕ್ಕಪಕ್ಕ ಅನಿಲ್ ರವರು ಇಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದಿ ಕೃಷ್ಣಾರೆಡ್ಡಿ ಏನು ಪ್ರತಿವಾದ ಪತ್ರ ಹಾಕಿರುತ್ತಾರೆ ಅಂತ ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುವುದಿಲ್ಲ. ನಿಮ್ಮ ಒಂದು ಗುಂಟೆ ಜಮೀನು ಅನಿಲ್ ರವರ ಆಸ್ತಿ ಪಕ್ಕದಲ್ಲಿ ಇರುವುದು ನೀವು ಸುಮ್ಮನೇ ಪ್ರತಿವಾದಿ ಕೃಷ್ಣಾರೆಡ್ಡಿ ರವರ ಮೇಲೆ ಗಲಾಟೆ ಮಾಡುತ್ತಿದ್ದೀರಿ ಎಂದರೆ ಸುಳ್ಳು ಅನಿಲ್ ರವರ ಆಸ್ತಿ ಈಗಲೂ ಅಲ್ಲಿ ಇದೆ ಎಂದರೆ ಇದೆ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.